

ತೇಲುವ ದ್ವೀಪಗಳ ಸಿಹಿ ನೀರಿನ ಸರೋವರ 'ಲೋಕ್‌ತಕ್'

ನೇತಾಜಿ ಸುಭಾಷ್‌ಚಂದ್ರ ಬೋಸರು ಮಹಾದಂಡನಾಯಕರಾಗಿದ್ದ ಐಎನ್‌ಎಯ ಕರ್ಮಭೂಮಿಯಾಗಿತ್ತು ಈ ಇಂಫಾಲ. ರಂಗೂನ್‌ನಿಂದ ಆರಂಭಿಸಿದ್ದ 'ದಿಲ್ಲಿ ಚಲೋ' ಅಭಿಯಾನದಲ್ಲಿ ಐಎನ್‌ಎ ಮತ್ತು ಜಪಾನಿನ ಜಂಟಿ ಸೈನ್ಯ, ಸೇನಾಧಿಕಾರಿ ಷಾ ನವಾಜ್‌ಖಾನ್ ನೇತೃತ್ವದಲ್ಲಿ ಈಶಾನ್ಯ ಭಾರತದಲ್ಲಿ ಮುಂದುವರಿಯುತ್ತಾ ಇಂಫಾಲದೆಡೆ ಸಾಗಿ ಬಂದಿತ್ತು. ಇಂಫಾಲವನ್ನು ವಶಪಡಿಸಿಕೊಳ್ಳುವುದು ಸುಭಾಷರ ಯೋಜನೆಯಾಗಿತ್ತು. ಆದರೆ ಭೀಕರ ಮುಂಗಾರು ರಸ್ತೆಗಳನ್ನೇ ಕೊಚ್ಚಿಹಾಕುತ್ತಿತ್ತು. ಸೈನಿಕರು ಆಮಶಂಕೆ, ಮಲೇರಿಯಾಗಳಿಂದ ಬಳಲಿ ಕಾರ್ಯಾಚರಣೆ ವಿಫಲಗೊಂಡಿತ್ತು.

ಬ್ರಿಟಿಷರ ವಿರುದ್ಧ ಕೆಚ್ಚಿನಿಂದ ಹೋರಾಡಿದ ಸುಭಾಷರ ಕುರಿತು ಈ ಭಾಗದ ಜನರಲ್ಲಿ ಅಪಾರವಾದ ಗೌರವವಿದೆ. ನೇತಾಜಿ ಆಡಿಟೋರಿಯಂನಲ್ಲಿ ಸಿಂಗಾಪುರದಲ್ಲಿ ಐಎನ್‌ಎ ಸ್ಥಾಪನೆಯಿಂದ ತೊಡಗಿ, ಹಂಗಾಮಿ ಸರ್ಕಾರ ಸ್ಥಾಪನೆ, ಟೋಕಿಯೋದಲ್ಲಿ ಸುಭಾಷರಿಗೆ ಮನ್ನಣೆ, ಮಣಿಪುರದ ಸ್ವಾತಂತ್ರ್ಯ ಹೋರಾಟಗಾರರು, ಅಂದಿನ ಪತ್ರಿಕೆಗಳ ಸಂಗ್ರಹ, ಇವೆಲ್ಲವನ್ನೂ ವಿವರಿಸುವ ವ್ಯವಸ್ಥೆ ಇದೆ.

## ಲೋಕ್‌ತಕ್ ಎಂಬ ಅಚ್ಚರಿ

ಲೋಕ್‌ತಕ್ ಜಗತ್ತಿನ ಏಕೈಕ ಸಿಹಿನೀರಿನ ತೇಲುವ ದ್ವೀಪ ಸಮೂಹಗಳ ಸರೋವರ. ಸುಮಾರು 300 ಚ.ಕಿ.ಮೀ. ವ್ಯಾಪ್ತಿಯಲ್ಲಿ ಹಬ್ಬಿರುವ ಈ ಸರೋವರದ ನೀರಿನ ಮೇಲಿನ ದ್ವೀಪಗಳಲ್ಲಿ ಬೆಟ್ಟಗಳಿವೆ, ರಸ್ತೆಗಳಿವೆ, ಸೈನಿಕ ಪಹರೆಯ ತಾಣಗಳಿವೆ. ಜನವಸತಿಯ ಹಳ್ಳಿಗಳಿವೆ. ಮೀನುಗಾರಿಕಾ ತಾಣಗಳೂ ಇವೆ.

ಸರೋವರದ ಕೊಳೆತ ಸಸ್ಯಗಳು ಮಣ್ಣಿನೊಂದಿಗೆ ಬೆರೆತು ಸರೋವರದ ಮೇಲೆ ತೇಲುವುದನ್ನು 'ಪಮ್ಡಿಸ್' ಎನ್ನುತ್ತಾರೆ. ಅವೇ ದ್ವೀಪಗಳಾಗಿ ಬೆಟ್ಟಗಳಾಗಿ ರೂಪುಗೊಂಡಿರುವ ವಿಸ್ಮಯದ ವೈಚಿತ್ರ್ಯ ಬೆರಗಾಗಿಸುತ್ತದೆ. ಮಳೆಗಾಲದಲ್ಲಿ ಸರೋವರದ ನೀರಿನ ಪ್ರಮಾಣ ಏರಿದಾಗ ಇಲ್ಲಿನ ಹಳ್ಳಿಗಳು, ಬೆಟ್ಟಗಳು, ರಸ್ತೆಗಳು ಕೂಡ ಏರಿದ ನೀರಿನ ಪ್ರಮಾಣದಲ್ಲೇ ಮೇಲೇರುತ್ತವೆ. ನೀರು ಇಳಿದಾಗ ಅವೂ ಇಳಿಯುತ್ತವೆ.

## ಕೀಬುಲ್ ಲೋಮ್‌ಜೀ ಉದ್ಯಾವನ

ಲೋಕ್‌ತಕ್ ಸರೋವರದಲ್ಲಿಯೇ ಕೀಬುಲ್ ಲೋಮ್‌ಜೀ ನ್ಯಾಷನಲ್ ಪಾರ್ಕ್ ಇದೆ. 40 ಚ.ಕಿ.ಮೀ. ವಿಸ್ತೀರ್ಣದ ಈ ಉದ್ಯಾನ ಅಳಿವಿನಂಚಿನ ಸಾಂಗೈ ಜಾತಿಯ ಜಿಂಕೆಗಳ ನೆಲೆ. ಇದನ್ನು ಮಣಿಪುರ ರಾಜ್ಯದ ಪ್ರಾಣಿ ಎಂದು ಪರಿಗಣಿಸಿದ್ದಾರೆ. ನಾವು ಹೋದಾಗ ಇಂಫಾಲದಲ್ಲಿ ನೆರವೇರುತ್ತಿದ್ದ 'ಮಣಿಪುರ್ ಉತ್ಸವ'ದ ಸಮಾರೋಪ ಸಮಾರಂಭ ಇಲ್ಲಿ ನಡೆಯುತ್ತಿತ್ತು. ನಾವು ಇಲ್ಲಿಗೆ ಬರುತ್ತಿದ್ದ ಮಣಿಪುರಿ ಜನರು, ಲುಂಗಿಯಂತಹ ಫಾನೆಕ್ ಮತ್ತು ಇನ್ನಾಫಿಸ್‌ನ (ಶಾಲು) ಸಾಂಪ್ರದಾಯಿಕ ಉಡುಗೆಯೊಂದಿಗೆ ಹಣೆಗೆ ಗಂಧ ಬಳಿದಿರುತ್ತಿದ್ದ ಮಹಿಳೆಯರನ್ನು ಗಮನಿಸುತ್ತಾ, ಸ್ಟಾಲುಗಳು, ತಿಂಡಿತಿನಿಸಿನ ಅಂಗಡಿಗಳಲ್ಲಿ ಸುತ್ತಾಡುತ್ತಾ ವೇದಿಕೆ ಕಾರ್ಯಕ್ರಮಗಳು, ಜಾನಪದ ನೃತ್ಯಗಳನ್ನು ನೋಡಿ ಆನಂದಿಸಿದೆವು.

ಮಣಿಪುರಿ ಭಾಷೆ ನಮಗೆ 'ಗ್ರೀಕ್–ಲ್ಯಾಟಿನ್ನೇ' ಆಗಿದ್ದರೂ ಮೀನುಗಾರರ ನೃತ್ಯ, ಜಾನಪದ ನೃತ್ಯ ಮುಂತಾದವನ್ನು ಆಸ್ವಾದಿಸಲು ಭಾಷೆಯ ಬೇಲಿಯಿರಲಿಲ್ಲ.



ಕಾಂಗ್ಲಾ ಕೋಟೆಯ ದ್ವಾರ

## ಸಾಂಸ್ಕೃತಿಕ ಸಮೃದ್ಧಿಯ ನಾಡು

ರಾಸಲೀಲಾ ಮಣಿಪುರಿ ನೃತ್ಯ ಸಾಂಸ್ಕೃತಿಕ ಕ್ಷೇತ್ರಕ್ಕೆ ರಾಜ್ಯದ ಕೊಡುಗೆಯಾದರೆ, ಕ್ರೀಡೆಗೆ ಸಂಬಂಧಿಸಿದಂತೆ ಜಗತ್ತಿಗೆ ಪೋಲೋ ಆಟವನ್ನು ಪರಿಚಯಿಸಿದ ರಾಜ್ಯವಿದು. ಈ ಕುರಿತು ಕ್ರಿ.ಪೂ. 33ರಷ್ಟು ಹಿಂದಿನ ದಾಖಲೆ ಇರುವುದು ರಾಜ್ಯದ ಪ್ರಾಚೀನ ಅಸ್ತಿತ್ವಕ್ಕೂ ನಿದರ್ಶನ.

ಇಂದಿಗೂ ಕಾಂಗ್ಲಾ ಕೋಟೆಯೊಳಗೆ ಪ್ರತಿ ಸಂಜೆಯೂ ಪೋಲೋ ಆಟ ಪ್ರದರ್ಶನವಿರುತ್ತದೆ. ಸೇನಾಪತಿ ಎಂಬ ಊರಿಂದ ಬೆಳಿಗ್ಗೆ ಹೊರಟ ನಾವು ಸ್ವಲ್ಪ ದೂರದ ಕುಮಾಸ್ ಎಂಬ ಹಳ್ಳಿಯಲ್ಲಿ ಬಸ್ ನಿಲ್ಲಿಸಿದ್ದಾಗ ಅಲ್ಲಿ ಸುಮ್ಮನೇ ಓಡಿಯಾಡುತ್ತಿದ್ದೆವು. ಒಬ್ಬಳು ತಾಯಿ ಅಂದು ಶಾಲೆಗೆ ರಜೆಯಿದ್ದುದರಿಂದ ತನ್ನ ಇಬ್ಬರು ಎಂಟ್ಹತ್ತು ವರ್ಷಗಳ ಮಕ್ಕಳೊಂದಿಗೆ ಬಂದಿದ್ದಳು. ಬೆನ್ನಿಗೆ ಕಟ್ಟಿದ ಬೆತ್ತದ ಬುಟ್ಟಿಗೆ ಅವರೆಲ್ಲ ಕಟ್ಟಿಗೆ ತುಂಬುತ್ತಿದ್ದರು.

ಆಸ್ಟ್ರೇಲಿಯಾದಲ್ಲಿ ವಿಶ್ವ ವೇಟ್‌ಲಿಫ್ಟಿಂಗ್‌ನಲ್ಲಿ ಚಿನ್ನ ಗೆದ್ದು ದಾಖಲೆ ಬರೆದ ಇದೇ ಮಣಿಪುರದ ಸಾಯಿಕೋಮ್ ಮೀರಾಬಾಯಿ ಚಾನು ನೆನಪಾದಳು. ಆಕೆ ಚಿಕ್ಕವಳಿದ್ದಾಗ ಅಣ್ಣನೊಂದಿಗೆ ಕಟ್ಟಿಗೆ ತರಲು ಕಾಡಿಗೆ ಹೋದಾಗ ಅಣ್ಣನಿಗಿಂತ ದೊಡ್ಡ ಹೊರೆ ತರಲು ಪ್ರಯತ್ನಿಸುತ್ತಿದ್ದಳಂತೆ!. ನಾವು ಮಾತಾಡಿಸಿದಾಗ ಈ ಮೂವರೂ ಬಾಯ್ತುಂಬ ನಗುತ್ತಾ ಮಾತಾಡಿದಾಗ, ಈ ಮಕ್ಕಳೂ ಮುಂದೆ ದಾಖಲೆ ಸಾಧನೆ ಮಾಡುವವರಾಗಲೆಂದು ಮನದಲ್ಲೇ ಹಾರೈಸುತ್ತಾ ಮಣಿಪುರಕ್ಕೆ ಪ್ರೀತಿಯ ವಿದಾಯ ಹೇಳಿದೆವು. ■